# ಸೆಲೆಬ್ರಿಟಿ

■ ಹನಿ

## ಪ್ರೀತಿಯ 'ಇಷ್ಕ್'

ಮತ್ತೆ ಐಪಿಎಲ್ ಜ್ವರದ ಮುನ್ಸೂಚನೆ ಕಾಣಿಸಿಕೊಂಡಿದೆ. ಪ್ರೇಕ್ಷಕರು ಮಾತ್ರವಲ್ಲದೆ, ಕ್ರಿಕೆಟಿಗರು, ಚಿತ್ರತಾರೆಯರು, ಉದ್ಯಮಿಗಳು ಮತ್ತು ರಾಜಕಾರಣಿಗಳೆಲ್ಲರೂ ಸಾಮೂಹಿಕವಾಗಿ ಸಂಭ್ರಮಿಸುವ 'ಇವೆಂಟ್'ನಂತೆ ಈಗ ಐಪಿಎಲ್ ಪರಿವರ್ತನೆಗೊಂಡಿದೆ. ಬಾಲಿವುಡ್ ತಾರೆಯರಲ್ಲಿ ಶಾರೂಕ್, ಶಿಲ್ಪಾ ಶೆಟ್ಟಿ ಮತ್ತು ಪ್ರೀತಿ ಜಿಂಟಾ ಐಪಿಎಲ್‌ನ ಮುಂಚೂಣಿಯಲ್ಲಿ ಇರುವವರು. ಶಿಲ್ಪಾ ಶೆಟ್ಟಿ ಹೆರಿಗೆ ರಜೆಯಲ್ಲಿ ಇರುವುದರಿಂದ ಈ ಸಲ ಶಾರೂಕ್ ಬಿಟ್ಟರೆ ಮಿಂಚುವ ತಾರೆ ಪ್ರೀತಿ ಜಿಂಟಾ ಒಬ್ಬಳೇ. 'ಕಿಂಗ್ಸ್ ಇಲೆವೆನ್ ಪಂಜಾಬ್' ತಂಡದ ಜಂಟಿ ಒಡತಿ ಪ್ರೀತಿ ಜಿಂಟಾ, ಐಪಿಎಲ್‌ನಲ್ಲಿ ಗಳಿಸಿದ್ದಕ್ಕಿಂತ ಕಳೆದುಕೊಂಡದ್ದೇ ಹೆಚ್ಚು. ಉದ್ಯಮಿ ನೆಸ್ ವಾಡಿಯಾ ಮತ್ತು ಪ್ರೀತಿ ಜಿಂಟಾ ಪಂಜಾಬ್ ತಂಡದ ಒಡೆತನದಲ್ಲಿ ತಲಾ ಶೇಕಡಾ 23ರಷ್ಟು ಪಾಲು ಬಂಡವಾಳವನ್ನು ಹೊಂದಿದ್ದಾರೆ. ಉಳಿದ ಬಂಡವಾಳವನ್ನು ಇತರ ಉದ್ಯಮಿಗಳಾದ ಮೋಹಿತ್ ಬರ್ಮನ್, ಕರಣ್‌ಪಾಲ್ ಮುಂತಾದವರು ಹೂಡಿದ್ದಾರೆ. ಈವರೆಗಿನ ಐಪಿಎಲ್ ಪಂದ್ಯಗಳಲ್ಲಿ ಪಂಜಾಬ್ ತಂಡದ ಸಾಧನೆ ಅಷ್ಟಕ್ಕಷ್ಟೆ. ಖ್ಯಾತನಾಮ ಆಟಗಾರರನ್ನು ಖರೀದಿಸುವಲ್ಲಿ ತಂಡ ಹಿಂದೆ ಬಿದ್ದಿಲ್ಲವಾದರೂ ಕಪ್ ಗೆಲ್ಲುವಲ್ಲಿ ನಿರಾಶೆಯೇ ಗತಿಯಾಗಿದೆ. ಇತರ ಐಪಿಎಲ್ ತಂಡಗಳ ಆದಾಯಕ್ಕೆ



ಹೋಲಿಸಿದರೆ ಪಂಜಾಬ್ ತಂಡಕ್ಕೆ ಬರುವ ಆದಾಯವೂ ಕಡಿಮೆಯೇ. ಹೀಗಾಗಿಯೇ ಕಳೆದ ವರ್ಷ ಪಂಜಾಬ್ ತಂಡದ ಮಾಲೀಕತ್ವದ ಕೆಪಿಎಚ್ ಡ್ರೀಮ್ ಕಂಪೆನಿಗೆ 35.26 ಕೋಟಿ ರೂಪಾಯಿ ನಷ್ಟವಾಗಿದೆಯಂತೆ! ಮೂರು ವರ್ಷಗಳಲ್ಲಿ ಒಟ್ಟು 68 ಕೋಟಿ ರೂಪಾಯಿ ನಷ್ಟವಾಗಿದೆ ಎನ್ನುತ್ತಿದೆ ಕಂಪೆನಿಯ ಆಡಿಟ್ ವರದಿ!

'ಕ್ರೀಡೆ ಎಂದ ಮೇಲೆ ನಷ್ಟ ಇದ್ದದ್ದೇ. ಈ ಸಲ ನಮ್ಮ ಪಂಜಾಬ್ ತಂಡ ಅತ್ಯುತ್ತಮ ಸಾಧನೆ ಮಾಡಲಿದೆ' ಎನ್ನುವುದು ಪ್ರೀತಿ ಜಿಂಟಾ ಆಶಾವಾದ. ಹಾಗೆ ನೋಡಿದರೆ 2012ರಲ್ಲಿ ಜಿಂಟಾ ಕೈಯಲ್ಲಿ ಸಿನಿಮಾಗಳೂ ಇಲ್ಲ. ಸದ್ಯಕ್ಕೆ ತಾನೇ ಅರ್ಧ ದುಡ್ಡು ಹಾಕಿ ನಿರ್ಮಿಸುತ್ತಿರುವ 'ಇಷ್ಕ್ ಇನ್ ಪ್ಯಾರಿಸ್' ಚಿತ್ರದ ನಟನೆಯಲ್ಲಿ ಬ್ಯುಸಿ ಆಗಿರುವ ಪ್ರೀತಿ, ಚಿತ್ರವನ್ನು ದೀಪಾವಳಿಗೆ 2–3 ವಾರ ಮುನ್ನವೇ ಬಿಡುಗಡೆ ಮಾಡುವ ಪ್ಲಾನ್ ಹಾಕಿದ್ದಾಳಂತೆ. ಈ ಇಂಡೊಫ್ರೆಂಚ್ ನಿರ್ಮಾಣದ ಚಿತ್ರದ ಶೂಟಿಂಗ್ ಪ್ಯಾರಿಸ್‌ನಲ್ಲಿ ನಡೆದಿದೆ. ಮೈನಸ್ 21 ಡಿಗ್ರಿ ಚಳಿಯಲ್ಲಿ ಶೂಟಿಂಗ್ ನಡೆಸಿದ ಅನುಭವಗಳನ್ನು ಪ್ರೀತಿ ಖುಷಿಯಿಂದ ಹಂಚಿಕೊಂಡಿದ್ದಾಳೆ. ಅದು ಬಿಟ್ಟರೆ ಬೇರೆ ಚಿತ್ರಗಳು ಇಲ್ಲದಿರುವುದರಿಂದ ಕ್ರಿಕೆಟ್ ಒಂದೇ ಸದ್ಯಕ್ಕೆ ಪ್ರೀತಿ ಪ್ರಚಾರದಲ್ಲಿರಲು ದಾರಿ ಎನ್ನುವಂತಾಗಿದೆ.

37ರ ಹರೆಯದ ಈ ಜಾಟ್ ಚೆಲುವೆ ಸಿನಿಮಾರಂಗಕ್ಕೆ ಕಾಲಿಟ್ಟದ್ದೂ ಆಕಸ್ಮಿಕವಾಗಿಯೇ. ಶೇಖರ್ ಕಪೂರ್‌ನ 'ತರ ರಂ ಪಂ ಪಂ' ಸಿನಿಮಾದ ಆಡಿಷನ್‌ಗೆ ತನ್ನ ಗೆಳತಿಯೊಬ್ಬಳಿಗೆ ಕರೆ ಬಂದಾಗ ಆಕೆಗೆ ಕಂಪೆನಿ ನೀಡಲು ಈಕೆಯೂ ಹೋಗಿದ್ದಳು. ಈಕೆಯನ್ನು ನೋಡಿದ ಶೇಖರ್ ಕಪೂರ್, ಅಲ್ಲೇ ಆಡಿಷನ್ ತಗೊಂಡು 'ನೀನೇ ಹೀರೋಯಿನ್' ಎಂದು ಆಯ್ಕೆ ಮಾಡಿದ! ಆದರೆ ಆ ಚಿತ್ರ ಪೂರ್ಣವಾಗಲಿಲ್ಲ. ಆದರೆ ಶೇಖರ್ ಕಪೂರ್ ಈಕೆಯ ಬಗ್ಗೆ ನಿರ್ದೇಶಕ ಮಣಿರತ್ನಂಗೆ ಶಿಫಾರಸು ಮಾಡಿದ. ಹಾಗಾಗಿ 'ದಿಲ್ ಸೆ' ಚಿತ್ರದಲ್ಲಿ ನಾಯಕಿಯಾಗಿ ಮಿಂಚಿದಳು. ಆ ಬಳಿಕ ದೊಡ್ಡ ಬ್ಯಾನರ್‌ಗಳೆಲ್ಲವೂ ಪ್ರೀತಿ ಬೆನ್ನುಬಿದ್ದವು. ಯಶ್ ಚೋಪ್ರಾ ತನ್ನ ಹೊಸ ಚಿತ್ರಕ್ಕೆ ಶಾರೂಕ್– ಕತ್ರೀನಾರನ್ನು ಆಯ್ಕೆ ಮಾಡಿ 'ಲಂಡನ್ ಇಷ್ಕ್' ಎಂದು ಹೆಸರಿಟ್ಟ ಸುದ್ದಿ ಬಂದಾಗ ಪ್ರೀತಿ ಹೌಹಾರಿದ್ದು ನಿಜ. ಆದರೆ ಈಗ ಆ ಹೆಸರು ಇಡುತ್ತಿಲ್ಲ ಎಂದು ಯಶ್ ಚೋಪ್ರಾ ಸ್ಪಷ್ಟೀಕರಣ ನೀಡಿದ್ದು ಪ್ರೀತಿ ನಿಟ್ಟುಸಿರು ಬಿಟ್ಟಿದ್ದಾಳೆ.

## ಹಾರುವ ಕುದುರೆ: ಜೋಸ್



ಜೋಸ್ ಮೌರಿನೋ ನಿಸ್ಸಂಶಯವಾಗಿಯೂ ಜಾಗತಿಕ ಫುಟ್‌ಬಾಲ್ ಕಂಡ ಸಾರ್ವಕಾಲಿಕ ಅತ್ಯುತ್ತಮ ಕೋಚ್. ಈತ ಯಾವ ತಂಡದ ಮ್ಯಾನೇಜರ್ ಆಗಿ ಸೇರಿಕೊಂಡರೂ ಒಂದೇ ವರ್ಷದಲ್ಲಿ ಆ ತಂಡ ವಿಶ್ವಮಟ್ಟದ ಟ್ರೋಫಿಗಳನ್ನು ಗೆದ್ದುಕೊಳ್ಳುತ್ತಿದೆ. ಸದ್ಯಕ್ಕೆ ರಿಯಲ್ ಮ್ಯಾಡ್ರಿಡ್ ಕ್ಲಬ್‌ನ ಮ್ಯಾನೇಜರ್ ಮತ್ತು ಕೋಚ್ ಆಗಿರುವ ಜೋಸ್, ಆ ತಂಡಕ್ಕೆ ಕೈಕೊಟ್ಟು ಮತ್ತೆ ಲಂಡನ್ನಿನ ಚೆಲ್ಸೀ ತಂಡದ ಮ್ಯಾನೇಜರ್ ಆಗಲಿದ್ದಾನೆಂದು ದಟ್ಟ ಸುದ್ದಿ ಹಬ್ಬಿದೆ. ಕಳೆದ ವಾರ ಲಂಡನ್ನಿನಲ್ಲಿ ಜೋಸ್ ಮನೆಯ ಹುಡುಕಾಟ ನಡೆಸಿದ್ದೂ ಈ ಸುದ್ದಿಗೆ ರೆಕ್ಕೆಪುಕ್ಕಗಳನ್ನು ಒದಗಿಸಿದೆ. ಜೋಸ್ ರಿಯಲ್ ಮ್ಯಾಡ್ರಿಡ್ ತಂಡವನ್ನು ಬಿಡದಂತೆ ಮನ ಒಲಿಸುವ ಕೆಲಸಗಳೂ ತೆರೆಮರೆಯಲ್ಲಿ ನಡೆದಿವೆ. ಆದರೆ ಜೋಸ್ ಬಗ್ಗೆ ಇದಮಿತ್ಥಂ ಎಂದು ಹೇಳುವಂತಿಲ್ಲ. ರಿಯಲ್ ಮ್ಯಾಡ್ರಿಡ್ ಜತೆಗೆ ಆತನ ಒಪ್ಪಂದ 2014ರವರೆಗೂ ಇದೆಯಾದರೂ, ಈ ಹಿಂದೆ ಇಂಟರ್ ಮಿಲಾನ್ ತಂಡಕ್ಕೂ ಹೀಗೆ ಒಪ್ಪಂದದ ಅವಧಿಯ ಮಧ್ಯೆ ಕೈಕೊಟ್ಟಿದ್ದ.

ಜೋಸ್ ಸದ್ಯಕ್ಕೆ ತರಬೇತಿದಾರನಾಗಿ ವರ್ಷಕ್ಕೆ ವಿಧಿಸುವ ಶುಲ್ಕ 11 ದಶಲಕ್ಷ ಯೂರೋ! ಅಂದರೆ ಸುಮಾರು 66 ಕೋಟಿ ರೂಪಾಯಿಗೂ ಹೆಚ್ಚು! ಜತೆಗೆ ಹೊಸ ಕ್ಲಬ್‌ಗೆ ಸೇರುವಾಗ ಸಿಗುವ ಇಡುಗಂಟು ಬೇರೆ! ಪೋರ್ಚುಗಲ್‌ನ ಈ ಬುದ್ಧಿವಂತ ತರಬೇತಿದಾರ ಯಾವ ತಂಡಕ್ಕೆ ಮ್ಯಾನೇಜರ್ ಆಗಿ ಸೇರಿದರೂ ಆ ತಂಡ ಗಳಿಸುವ ಗೋಲುಗಳ ಸಂಖ್ಯೆ ಏರಿಕೆಯಾಗುತ್ತಲೇ ಇರುತ್ತದೆ. ಎಷ್ಟೇ ಖ್ಯಾತನಾಮ ಆಟಗಾರನಾದರೂ ಕ್ಯಾರೆ ಎನ್ನದೆ ತಂಡದ ಹಿತಾಸಕ್ತಿಯಿಂದ ಅವರನ್ನು ದುಡಿಸಿಕೊಳ್ಳುವುದು ಮತ್ತು ಸಕಾಲದಲ್ಲಿ ಸೂಕ್ತ ತಂತ್ರಗಾರಿಕೆಯನ್ನು ಅನುಸರಿಸುವುದರಲ್ಲಿ ಜೋಸ್‌ನದ್ದು ಎತ್ತಿದ ಕೈ. 2010 ರಿಂದ ಜೋಸ್ ರಿಯಲ್ ಮ್ಯಾಡ್ರಿಡ್ ಕೋಚ್ ಆಗಿದ್ದಾರೆ. ಈ ಅವಧಿಯಲ್ಲಿ ತಂಡದ ಪರವಾಗಿ 278 ಗೋಲುಗಳನ್ನು ಹೊಡೆದಿದ್ದರೆ, ವಿರುದ್ಧವಾಗಿ ಬಂದದ್ದು ಕೇವಲ 82. ಈ ಹಿಂದೆ ಜೋಸ್ ಚೆಲ್ಸೀ ತಂಡದ ಕೋಚ್ ಆಗಿದ್ದಾಗಲೂ (2004ರಿಂದ 2007) ತಂಡದ ಪರ 330 ಗೋಲುಗಳು ದಾಖಲಾಗಿದ್ದರೆ, ವಿರುದ್ಧ ಕೇವಲ 119 ಗೋಲುಗಳು ಬಿದ್ದಿದ್ದವು. 'ನಮ್ಮ ಹುಡುಗರು ಎಷ್ಟು ಚೆನ್ನಾಗಿ ಆಡುತ್ತಾರೆನ್ನುವುದನ್ನು ನಾನು ನೋಡುವುದಿಲ್ಲ. ಎಷ್ಟು ಗೋಲುಗಳನ್ನು ಹೊಡೆಯುತ್ತಾರೆ ಎನ್ನುವುದೇ ನನಗೆ ಮುಖ್ಯ' ಎಂಬುದು ಜೋಸ್ ಮೌರಿನೋ ಮೂಲಮಂತ್ರ. ಹೀಗಾಗಿಯೇ ಆಟಗಾರರ ಜತೆಗೆ, ಕ್ಲಬ್‌ನ ಮಾಲೀಕರ ಜತೆಗೆ ಜಗಳ ಆಡುವುದರಲ್ಲೂ ಮೌರಿನೋ ಎತ್ತಿದ ಕೈ. ಹಾಗೆಂದು ಜೋಸ್ ಕೈಬಿಡಲು ಯಾರೂ ತಯಾರಿಲ್ಲ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65